**Code No. 06 X**

### ವಾಣಿಜ್ಯ ಪರೀಕ್ಷೆಗಳು

## ಕನ್ನಡ ಬೆರಳಚ್ಚು – ಪ್ರವೀಣ ದರ್ಜೆ – ಪ್ರಥಮ ಪತ್ರಿಕೆ

ಜುಲೈ, 2015

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗಿನ ಲೇಖನವನ್ನು 10 ರಿಂದ 70 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಹಾಳೆಯ ಒಂದೇ ಕಡೆ ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಿ.
2) ಸಾಲುಗಳ ಕೊನೆಯಲ್ಲಿ ಇದರ ಅಂಕಿಗಳನ್ನು ಬೆರಳಚ್ಚು ಮಾಡಬಾರದು.
3) ] ಈ ಚಿಹ್ನೆ ಇರುವಲ್ಲಿಯವರೆಗೂ ಬೆರಳಚ್ಚು ಮಾಡಿ. ಒಂದು ವೇಳೆ ಚಿಹ್ನೆಗಿಂತ ಇನ್ನೂ ಹೆಚ್ಚು ಬೆರಳಚ್ಚು ಮಾಡಿದಲ್ಲಿ ಅರ್ಹತಾ ಪತ್ರದಲ್ಲಿ ವೇಗವನ್ನು ನಮೂದಿಸಲು ಮಾತ್ರ ಪರಿಗಣಿಸಲಾಗುವುದು.

ಶಿಕ್ಷಣ ಕ್ಷೇತ್ರದಲ್ಲಿ ವೃತ್ತಿ ಶಿಕ್ಷಣಕ್ಕೆ ಮಹತ್ತರವಾದ ಸ್ಥಾನವಿದೆ. ವೃತ್ತಿ ಶಿಕ್ಷಣದಲ್ಲಿ 63
ತಾಂತ್ರಿಕ ಹಾಗೂ ವೈದ್ಯಕೀಯ ಶಿಕ್ಷಣಗಳು ಪ್ರಮುಖವಾದವು. ತಾಂತ್ರಿಕ ಶಿಕ್ಷಣ 119
ಕ್ಷೇತ್ರದಲ್ಲಿ ಎಂಜಿನಿಯರಿಂಗ್, ಪಾಲಿಟೆಕ್ನಿಕ್, ವಾಸ್ತುಶಿಲ್ಪಗಳು ಹಾಗೂ ವೈದ್ಯಕೀಯ 185
ದಂತ ವೈದ್ಯಕೀಯ ಪಶು ವೈದ್ಯಕೀಯ, ಕೃಷಿ ಫಾರ್ಮಸಿ ಹಾಗೂ ನರ್ಸಿಂಗ್ ಮುಂತಾದ 249
ಕೋರ್ಸುಗಳಿವೆ. ಪ್ರಸ್ತುತ ವೃತ್ತಿ ಶಿಕ್ಷಣವು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. 312
ವೃತ್ತಿ ಶಿಕ್ಷಣದ ಪ್ರವೇಶಕ್ಕೆ ಹಲವಾರು ಅಡೆತಡೆಗಳು ಉದ್ಭವಿಸುತ್ತಿವೆ. ವೃತ್ತಿ ಶಿಕ್ಷಣ 372
ಕಾಲೇಜುಗಳ ಕೋರ್ಸುಗಳಿಗೆ ಅರ್ಹತೆ ಪಡೆಯಲು ಪ್ರವೇಶ ಪರೀಕ್ಷೆ ಕಡ್ಡಾಯ. ಆದರೆ 437
ಪಾಲಿಟೆಕ್ನಿಕ್ ಹಾಗೂ ಕೃಷಿ ಪದವಿಗಳಂತಹ ವೃತ್ತಿ ಶಿಕ್ಷಣಕ್ಕೆ ಪ್ರವೇಶ ಪರೀಕ್ಷೆಯ ಅಗತ್ಯ ಇಲ್ಲ. 507
ವಿಜ್ಞಾನ ವಿಷಯ ತೆಗೆದುಕೊಂಡಿರುವ ಪ್ರೀ–ಯೂನಿವರ್‌ಸಿಟಿ ಕೋರ್ಸ್ ವಿದ್ಯಾರ್ಥಿಗಳು 572
ಪದವಿ ಪೂರ್ವ ಶಿಕ್ಷಣ ಮಂಡಳಿಯು ನಡೆಸುವ ಪರೀಕ್ಷೆಗಳಲ್ಲಿ ಐಚ್ಛಿಕ ವಿಷಯಗಳಲ್ಲಿ ಕನಿಷ್ಠ 638
ಶೇಕಡಾ ಐವತ್ತು ಅಂಕಗಳನ್ನು ಪಡೆದರೆ ಆ ವಿದ್ಯಾರ್ಥಿಯು ಪ್ರವೇಶ ಪರೀಕ್ಷೆಗೆ ಹಜರಾಗಲು 706
ಅರ್ಹರಾಗಿರುತ್ತಾರೆ. 720

[ Turn over

ಈ ಬಾರಿ ಸರ್ವೋಚ್ಚ ನ್ಯಾಯಾಲಯವು ವೃತ್ತಿ ಶಿಕ್ಷಣದ ಪ್ರವೇಶದ ದೊಡ್ಡ 782
ಪಿಡುಗು ಎನಿಸಿರುವ ಕ್ಯಾಪಿಟೇಷನ್ ವಿರುದ್ಧ ಸಮರ ಸಾರಿ, ಒಂದು ಐತಿಹಾಸಿಕ ಆಜ್ಞೆಯನ್ನು 847
ಹೊರಡಿಸಿತು. ಇದರ ಪ್ರಕಾರ ಎಲ್ಲಾ ಸರ್ಕಾರಿ ಕಾಲೇಜುಗಳಲ್ಲಿ ಶೇಕಡಾ ನೂರರಷ್ಟು 909
ಅನುದಾನ ಸಹಿತ ಕಾಲೇಜುಗಳಲ್ಲಿ ಶೇಕಡಾ ಎಪತ್ತೈದು ಹಾಗೂ ಅನುದಾನ ರಹಿತ 966
ಕಾಲೇಜುಗಳಲ್ಲಿ ಶೇಕಡಾ ಐವತ್ತು ಸೀಟುಗಳನ್ನು ಮೆರಿಟ್ ಪ್ರಕಾರ ಉಚಿತವಾಗಿ ಕೊಡಬೇಕು. 1032
ಉಳಿದ ಸೀಟುಗಳನ್ನು ಶುಲ್ಕದ ಸೀಟುಗಳೆಂದು ಪರಿಗಣಿಸಿ, ಡೊನೇಷನ್ ಆಧಾರದ ಮೂಲಕ ಆದೂ 1101
ಪ್ರತಿಭಾವಂತ ವಿದ್ಯಾರ್ಥಿಗಳಿಗೇ ನೀಡಬೇಕೆಂದು ಆಜ್ಞೆ ಹೊರಡಿಸಿತು. ಈ ಶುಲ್ಕದ ಸೀಟುಗಳಲ್ಲಿ 1172
ಪ್ರವೇಶ ಪಡೆಯಲು ಹೊರ ರಾಜ್ಯದ ಅಭ್ಯರ್ಥಿಗಳಿಗೂ ಮುಕ್ತ ಅವಕಾಶ ಕಲ್ಪಿಸಿತ್ತು. ಹಾಗಾಗಿ 1241
ಈ ಬಾರಿಯ ಪ್ರವೇಶ ಪರೀಕ್ಷೆ ಅತ್ಯಂತ ಸ್ಪರ್ಧಾತ್ಮಕವೆನಿಸಿತು. ಕರ್ನಾಟಕ ಹಾಗೂ 1303
ಹೊರ ರಾಜ್ಯದ ಅಭ್ಯರ್ಥಿಗಳ ನಡುವೆ ಅತ್ಯಂತ ಬಿರುಸಿನ ಸ್ಪರ್ಧೆ ನಡೆಯಿತು. 1359

ಸಾವಿರದ ಒಂಬೈನೂರ ತೊಂಬತ್ತ ಮೂರರ ಪರೀಕ್ಷೆ ತೆಗೆದುಕೊಂಡವರು ಸುಮಾರು 1435
ಅರವತ್ತಾರು ಸಾವಿರ ಮಂದಿ. ಅವರಲ್ಲಿ ಪರೀಕ್ಷೆಗೆ ಹಾಜರಾದವರು ಐವತ್ತಮೂರು ಸಾವಿರದ 1501
ಮೂರು ನೂರ ಇಪ್ಪತ್ತನಾಲ್ಕು ಮಂದಿ. ಇವರಲ್ಲಿ ಇಪ್ಪತ್ತಾರು ಸಾವಿರದ ಎಂಟುನೂರ 1555
ಏಳು ಅಭ್ಯರ್ಥಿಗಳು ಕರ್ನಾಟಕರಾದರೆ ಉಳಿದ ಇಪ್ಪತ್ತಾರು ಸಾವಿರದ ಐದು ನೂರ ಹದಿನೇಳು 1616
ಮಂದಿ ಹೊರ ರಾಜ್ಯದವರು. 1634

ರಾಜ್ಯದಲ್ಲಿರುವ ಎಂಜಿನಿಯರಿಂಗ್ ಕಾಲೇಜುಗಳಲ್ಲಿರುವ ಒಟ್ಟು ಲಭ್ಯ ಸೀಟುಗಳ 1699
ಸಂಖ್ಯೆ ಹದಿನೆಂಟು ಸಾವಿರದ ಮೂರುನೂರು ಮುವತ್ತನಾಲ್ಕು. ಇದರಲ್ಲಿ ಹತ್ತು ಸಾವಿರ 1760
ಎಂಟುನೂರ ಇಪ್ಪತ್ತಮೂರು ಉಚಿತ ಸೀಟುಗಳು ರಾಜ್ಯದ ಅಭ್ಯರ್ಥಿಗಳಿಗೇ ಮೀಸಲು 1821
ಹಾಗೆಯೇ ವೈದ್ಯಕೀಯ ಕಾಲೇಜುಗಳಲ್ಲಿರುವ ಒಟ್ಟು ಮೂರು ಸಾವಿರದ ಮೂರು ನೂರ 1886
ಅರವತ್ತೊಂದು ಸೀಟುಗಳ ಪೈಕಿ ಒಂದು ಸಾವಿರದ ಒಂಬೈನೂರ ತೊಂಬತ್ತೆಂಟು ಸೀಟುಗಳು 1951
ರಾಜ್ಯದ ಅಭ್ಯರ್ಥಿಗಳಿಗೇ ಉಚಿತವಾಗಿ ದೊರಕುವುದು. ಉಳಿದೆಲ್ಲ. ಸೀಟುಗಳೂ ಪ್ರವೇಶ 2013

ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಅರ್ಹತೆ ಪಡೆದ ವಿದ್ಯಾರ್ಥಿಗಳಿಗೆ ಕರ್ನಾಟಕ ಹಾಗೂ ಹೊರ ರಾಜ್ಯದ 2084
ವಿದ್ಯಾರ್ಥಿಗಳಿಗೆ ಮೆರಿಟ್ ಆಧಾರದ ಮೇಲೆ ಡೊನೇಷನ್ ಪಡೆದು ನೀಡಲಾಗುವುದು. ಸರ್ವೋಚ್ಚ 2157
ನ್ಯಾಯಾಲಯವು ಹೊರಡಿಸಿದ ಈ ಆಜ್ಞೆ ಹಲವಾರು ಗೊಂದಲಗಳಿಗೆ ಕಾರಣವಾಯಿತು. 2219
ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳು ನ್ಯಾಯಾಲಯದ ಆಜ್ಞೆ ಪಾಲಿಸಲು 2280
ಬದ್ಧವಾದರೆ ಅನುದಾನರಹಿತ ಕಾಲೇಜುಗಳು ಬಂಡೆದ್ದವು. ಖಾಸಗಿ ಕಾಲೇಜುಗಳು 2335
ವಿದ್ಯಾರ್ಥಿಗಳಿಗೆ ಪ್ರಥಮ ವರ್ಷದ ಪ್ರವೇಶವನ್ನೇ ನಿಲ್ಲಿಸಿರುವುದರ ಮೂಲಕ ಕಾಲೇಜುಗಳನ್ನೇ 2405
ಮುಚ್ಚುವ ಬೆದರಿಕೆ ಹಾಕಿದರೆ ರಾಜ್ಯ ಸರ್ಕಾರ ಇದಕ್ಕೆ ಮಣಿಯಲಿಲ್ಲ. ಅದು ಖಾಸಗಿ 2466
ಕಾಲೇಜುಗಳ ಆಡಳಿತ ಮಂಡಳಿಯೊಂದಿಗೆ ಫಲಪ್ರದ ಒಪ್ಪಂದಗಳನ್ನು ನಡೆಸಿತು. ಅಷ್ಟೇ 2529
ಅಲ್ಲದೇ ಈ ಷರತ್ತುಗಳನ್ನು ಒಪ್ಪದಿದ್ದರೆ, ಖಾಸಗಿ ಕಾಲೇಜುಗಳಿಗೆ ಸರ್ಕಾರದ ವತಿಯಿಂದ 2594
ಪ್ರತಿ ಕಾಲೇಜಿಗೂ ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸಿ ವಿದ್ಯಾರ್ಥಿಗಳಿಗೆ ಪ್ರವೇಶ 2656
ಕಲ್ಪಿಸುವ ಅಭಯವನ್ನು ವಿದ್ಯಾರ್ಥಿಗಳಿಗೆ ನೀಡಿತು. ಅಷ್ಟರಲ್ಲಿ ಪ್ರವೇಶ ಪರೀಕ್ಷೆಯ 2720
ಫಲಿತಾಂಶ ಆಗಸ್ಟ್ ಏಳರಂದು ಪ್ರಕಟವಾಯಿತು. ಇದಕ್ಕೆ ಮೊದಲು ಮೂರು ಬಾರಿ 2782
ಫಲಿತಾಂಶ ಪ್ರಕಟಿಸಲು ನಿಗದಿಯಾದ ದಿನಾಂಕಗಳು ಮುಂದಕ್ಕೆ ಹೋಗಿ ವಿದ್ಯಾರ್ಥಿಗಳು 2884
ಹಾಗೂ ಪೋಷಕರು ಆತಂಕಕ್ಕೀಡಾಗಿದ್ದರು. ಈ ಬಾರಿ ಪ್ರವೇಶ ಪರೀಕ್ಷೆಯಲ್ಲಿ 2905
ಇಂಜಿನಿಯರಿಂಗ್‌ಗೆ ಮುವತ್ತು ಸಾವಿರದ ಎರಡು ನೂರ ಎಂಬತ್ತೇಳು ವಿದ್ಯಾರ್ಥಿಗಳು 2966
ವೈದ್ಯಕೀಯಕ್ಕೆ ಇಪ್ಪತ್ತೆಂಟು ಸಾವಿರದ ಎರಡು ನೂರ ತೊಂಭತ್ತೈದು ವಿದ್ಯಾರ್ಥಿಗಳು 3030
ಫಾರ್ಮಸಿ ವಿಭಾಗಕ್ಕೆ ಹದಿನಾರು ಸಾವಿರದ ಮೂರು ನೂರ ಹನ್ನೆರಡು ವಿದ್ಯಾರ್ಥಿಗಳು 3090
ಅರ್ಹತೆ ಪಡೆದಿದ್ದಾರೆ. ಈ ನಡುವೆ ರಾಜ್ಯ ಸರ್ಕಾರದ ಮತ್ತೊಂದು ಆಜ್ಞೆ ಈ ಆಜ್ಞೆಯ 3157
ಪ್ರಕಾರ ಸೀಟುಗಳನ್ನು ಹಂಚುವಾಗ ಆಯಾ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲೇ 3212
ಹಂಚಬೇಕೆಂದು ಪ್ರಕಟಿಸು. ಆಗ ರಾಜ್ಯದ ತಾಂತ್ರಿಕ ಹಾಗೂ ವೈದ್ಯಕೀಯ ಶಿಕ್ಷಣ 3272
ಮಂಡಳಿಯ ಮತ್ತೊಮ್ಮೆ ಗೊಂದಲಕ್ಕೀಡಾಯಿತು. ಅದು ಮತ್ತೆ ಹೊಸದಾಗಿ 3333

ಪರಿಶೀಲನೆ ನಡೆಸಿ, ಆಯಾ ವಿದ್ಯಾರ್ಥಿಗಳಿಗೆ ಸಿಗಬೇಕಾದ ಕಾಲೇಜುಗಳ ಹಾಗೂ 3390
ಕೋರ್ಸುಗಳ ಪಟ್ಟಿಯನ್ನು ಹೊಸದಾಗಿ ಸಿದ್ಧಪಡಿಸುತ್ತಿದೆ. ಈ ರೀತಿ ವೃತ್ತಿ ಶಿಕ್ಷಣದ 3453
ಪ್ರವೇಶದಲ್ಲಿನ ಅಡ್ಡಿ ಆತಂಕಗಳು ಹಲವು ಆದರೂ ರಾಜ್ಯ ಸರ್ಕಾರವು ಸರ್ವೋಚ್ಚ 3506
ನ್ಯಾಯಾಲಯದ ಆಜ್ಞೆಯನ್ನು ಪಾಲಿಸುವತ್ತ ದಿಟ್ಟ ಹೆಜ್ಜೆ ಇಟ್ಟಿದೆ. ಇದು ಸ್ಪರ್ಧಾತ್ಮಕ 3571
ಯುಗವಾದ್ದರಿಂದ ಯಾವುದೇ ವೃತ್ತಿಪರ ಕಾಲೇಜಿಗೆ ಪ್ರವೇಶ ಪಡೆಯುವುದು 3628
ಸುಲಭವಂತೂ ಅಲ್ಲ. ಈ ನಡುವೆ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಅರ್ಹತೆ 3690
ಪಡೆದ ಸುಮಾರು ಮೂವತ್ತು ಸಾವಿರ ವಿದ್ಯಾರ್ಥಿಗಳ ಭವಿಷ್ಯವೂ ತೂಗಾಡುತ್ತಲಿದೆ. ] 3750

ಪಾಠದಂಗಡಿಗಳು ಎಂದು ಬಣ್ಣಿಸಲಾಗುತ್ತಿರುವ ಮನೆಪಾಠ ಎಂಬ ಶೈಕ್ಷಣಿಕ ಪಿಡುಗನ್ನು 3816
ಕುರಡುರು ಆಸೆಯನ್ನು ಬಣ್ಣಿಸುವ ರೀತಿಗೆ ಹೋಲಿಸುತ್ತಿರುವ ಈ ಸಂದರ್ಭದಲ್ಲಿ ಆ ಹತ್ತು 3884
ಹಲವು ಕುರುಡರ ವಿವೇಚನೆಗಳನ್ನು ಒಟ್ಟಾಗಿ ಪರಿಗಣಿಸಿ ಅರ್ಥೈಸುವುದು ಯುಕ್ತವೆನಿಸುತ್ತದೆ. 3950
ಈ ಒಟ್ಟಾರೆ ಸಮಸ್ಯೆಯ ಹತ್ತು ಹಲವು ಅಂಶಗಳಲ್ಲಿ ವಿದ್ಯಾರ್ಥಿ ಹಾಗೂ ಅಧ್ಯಾಪಕ 4011
ಪ್ರಮುಖವಾಗಿ ಪರಿಗಣಿಸಲ್ಪಟ್ಟರೂ ಪೋಷಕರು ಇಂದಿನ ಸಮಾಜದ ಪ್ರಸ್ತುತ ಧೋರಣೆಗಳು 4077
ಹಾಗೂ ಶಿಕ್ಷಣ ಪದ್ಧತಿಯ ಪಾತ್ರ ಕಿರಿದೇನಲ್ಲ. ದಡ್ಡ ವಿದ್ಯಾರ್ಥಿಗಳ ಸ್ವತ್ತು ಮಾತ್ರ, 4139
ಎಂದು ಪರಿಗಣಿಸಲಾಗಿದ್ದ ಮನೆಪಾಠ ಈಗ ಅನಿವಾರ್ಯ ಸಂಗತಿಯಾದುದಕ್ಕೆ ಕಾರಣಗಳು 4202
ಹತ್ತು ಹಲವು. ಸಾಂಪ್ರದಾಯಿಕ ಪದವಿಗಳು ತಮ್ಮ ಅನ್ನ ಹಾಕುವ ಅಥವಾ ಸಮಾಜದಲ್ಲಿ 4264
ಗುರುತರವಾದ ಸ್ಥಾನ ದೊರಕಿಸಿಕೊಡಲು ವಿಫಲವಾಗುತ್ತಿರುವುದು, ಬಾಲ್ಯದಿಂದಲೇ ನೀನು 4328
ಎಂಜಿನಿಯರ್ ಅಥವಾ ಡಾಕ್ಟರ್ ಆಗಲೇಬೇಕೆಂದು ಪೋಷಕರು ಹೇರುವ ಒತ್ತಡ, ತಮ್ಮಿಂದ 4398
ಪಡೆಯಲಾಗದ್ದನ್ನು ತಮ್ಮ ಮಕ್ಕಳ ನಿಲುಕಿಗೆ ತರಲು ಹೋರಾಟ ನಡೆಸುವ ಮಧ್ಯಮ 4459
ವರ್ಗದ ಮಾತಾಪಿತೃಗಳು ಕಾರಣಕರ್ತರುಗಳಾಗಿರುತ್ತಾರೆ. 4500